# ಆಹಾ ಸುದ್ದಿ!

★ ಸಸಿತೋಟ



ಆಟೋ ಸರಿಯಾಗೇ ನಿಂತಿದೆ. ಅದನ್ನು ಹಿಡಿಯಲು ಈ ರೀತಿಯ ಸಾಹಸದ ಅಗತ್ಯ ಇರಲಿಲ್ಲ ಅಲ್ಲವೇ? ಹೇಗೆ ತಿಪ್ಪರಲಾಗಾ ಹಾಕಿದರೂ ಇಂತಹ ಸಾಹಸ ಮಾಡಲು ಸಾಧ್ಯವಿಲ್ಲ. ಆದರೆ ನಿಂತ ಮನೆಯೇ ತಲೆಕೆಳಗಾಗಿ, ಆಟೋ ಕೂಡಾ ತಲೆ ಕೆಳಗಾಗಿ, ಚಿತ್ರವನ್ನೂ ತಲೆಕೆಳಗಾಗಿ... ಥಾಯ್ಲೆಂಡ್‌ನ ಫುಕೆಟ್‌ನಲ್ಲಿ ಈ ರೀತಿಯ ಮನೆಯಿದ್ದು, ಕಟ್ಟಿಸಿದವನು ತಲೆಯನ್ನು ಯಾವ ರೀತಿ ಇಟ್ಟುಕೊಂಡು ಆಲೋಚನೆ ಮಾಡಿದ್ದನೋ!

ಚೀನಾದಲ್ಲಿ ಯುವಕ- ಯುವತಿ ಮದುವೆ ನಿಶ್ಚಯವಾಗಿದ್ದು, ಮದುವೆ ಉಡುಪಿನಲ್ಲಿ ಫೊಟೊ ಶೂಟ್‌ಗೆ ಬಂದರು. ಆದರೆ ವಧು ವರನನ್ನು ಮಂಗ ಮಾಡಲು ಮುದುಕಿಯಂತೆ ಮುಖದ ತುಂಬ ನೆರಿಗೆ, ಬಿಳಿ ಕೂದಲಿನ ಮೇಕಪ್ ಮಾಡಿಕೊಂಡು ಬಂದಿದ್ದೇ ಎಡವಟ್ಟಾಯಿತು. ವರ ಮದುವೆಯನ್ನೇ ರದ್ದು ಮಾಡಿ ಹೊರಟು ಹೋದನಂತೆ. ಅದಕ್ಕೇ ಹೇಳುವುದು, ಒಳ್ಳೆಯದಿರಲಿ- ಕೆಟ್ಟದಿರಲಿ, ಬಡವರಿರಲಿ- ಸಿರಿವಂತರಿರಲಿ, ರೋಗಿಯಿರಲಿ- ಆರೋಗ್ಯಂತನಿರಲಿ ಚೆನ್ನಾಗಿ ಕಾಣಿಸಿಕೊಂಡು ಮೆರೆಯಬೇಕು ಎಂದು.



ಲಂಡನ್ನಿನಲ್ಲಿ ಈಚೆಗೆ ರೂಬಿಕ್ ಕ್ಯೂಬ್ ಸ್ಪರ್ಧೆ ನಡೆಯಿತು. ಕೈಗಳಲ್ಲಿ ಕ್ಯೂಬ್ ತಿರುಗಿಸಿ ಸಾಕಾದವರು ಕಾಲಿಗೆ ಕೆಲಸ ಕೊಟ್ಟರು. ಹೊಸ ಸ್ಪರ್ಧೆಗಳ ಬಗ್ಗೆ ಯೋಚಿಸಿ ತಲೆ ಕೆಡಿಸಿಕೊಂಡವರು ಇನ್ನು ಮುಂದೆ ಕೈಗಳಲ್ಲಿ ಮಾಡುವುದನ್ನು ಕಾಲುಗಳಲ್ಲಿ, ಕಾಲುಗಳಲ್ಲಿ ಮಾಡುವುದನ್ನು ಕೈಗಳಲ್ಲಿ ಮಾಡುವ ಸವಾಲು ಹಾಕಿದರಾಯ್ತು. ಕ್ರಿಕೆಟ್‌ನಲ್ಲಾದರೆ ಲೆಫ್ಟ್ ಹ್ಯಾಂಡ್ ಬ್ಯಾಟ್ಸ್‌ಮನ್ ಎನ್ನುವ ಬದಲು ಲೆಫ್ಟ್‌ಲೆಗ್ ಬ್ಯಾಟ್ಸ್‌ಮನ್ ಎನ್ನುವ ಸಣ್ಣ ಬದಲಾವಣೆ ಅಷ್ಟೆ.

ರಷ್ಯಾದ ಈ ನೂತನ ದಂಪತಿ 'ಹಗ್ಗ ಜಿಗಿತ'ವೆಂಬ ಅತ್ಯಂತ ಅಪಾಯಕಾರಿ ಕ್ರೀಡೆಯಲ್ಲಿ ಪಾಲ್ಗೊಂಡರು. ವಧು-ವರರು ಮಧುಚಂದ್ರಕ್ಕೆ ತೆರಳುವ ಬದಲು ಯಮಲೋಕಕ್ಕೆ ಕಳಿಸಬಹುದಾದ ಅಪಾಯಕಾರಿ ಕ್ರೀಡೆಗಳಲ್ಲಿ ಪಾಲ್ಗೊಳ್ಳುವ ಹೊಸ ಹವ್ಯಾಸ ವಿದೇಶಗಳಲ್ಲಿ ಜನಪ್ರಿಯವಾಗುತ್ತಿದ್ದು, ಒತ್ತಾಯದ ಮದುವೆ ಈ ಸಾಹಸದ ಹಿಂದೆ ಇರಲಿಕ್ಕಿಲ್ಲ.



ಕೇಪ್ ಟೌನಿನ ಈ ವ್ಯಕ್ತಿಯ ಮೈತುಂಬ ಕಾಮಿಕ್ ಪುಸ್ತಕದ ಹಚ್ಚೆಗಳು. ಆತನ ಚಿಕ್ಕ ಮಗು ತಂದೆಯ ದೇಹ ನೋಡಿದ ಕೂಡಲೇ ಕಾಮಿಕ್ಸ್ ನೋಡಿದಂತಾಗಿ ಅಳುವನ್ನು ನಿಲ್ಲಿಸುವುದಂತೆ. ಅಷ್ಟಕ್ಕೂ ಈತ ಕುಖ್ಯಾತ ದರೋಡೆಕೋರರ ಗುಂಪಿನವನಾಗಿದ್ದು, ಆಯುಷ್ಯದ ಅರ್ಧ ಭಾಗವನ್ನು ಅಂದರೆ 25 ವರ್ಷಗಳನ್ನು ಜೈಲಿನಲ್ಲಿ ಕಳೆದಿದ್ದಾನಂತೆ. ಅದು ಹೇಗೆ ಜೈಲಿನಲ್ಲಿ ಕಾಮಿಕ್ಸ್ ನೆನಪು ಮಾಡಿಕೊಂಡು ಖುಷಿಪಟ್ಟನೋ!

ಈಜಿಪ್ಟ್‌ನಲ್ಲಿ ಲಾರಿ ಚಾಲಕನೊಬ್ಬ ಮಾದಕ ದ್ರವ್ಯ ಸೇವಿಸಿದ್ದಾನೆಂಬ ಶಂಕೆಯಿಂದ ಆತನ ಮೂತ್ರ ಪರೀಕ್ಷೆಗೆ ಸಂಬಂಧಪಟ್ಟ ಅಧಿಕಾರಿಗಳು ಮುಂದಾದರಂತೆ. ಪರೀಕ್ಷೆ ಮಾಡಿದ ಪ್ರಯೋಗಾಲಯದವರು ಮತ್ತೊಮ್ಮೆ 'ಮೂತ್ರ ನಿನ್ನದೇ?' ಎಂದು ಪ್ರಶ್ನಿಸಿದಾಗ ಚಾಲಕ ಹೌದೆಂದು ಎದೆಯುಬ್ಬಿಸಿ ಹೇಳಿದನಂತೆ. ಪ್ರಯೋಗಾಲಯದವರು ಮತ್ತು ಅಧಿಕಾರಿಗಳು ಆತನಿಗೆ 'ಅಭಿನಂದನೆಗಳು. ನೀನು ಗರ್ಭ ಧರಿಸಿದ್ದೀಯ' ಎಂದಾಗ ತಬ್ಬಿಬ್ಬಾಗುವ ಸರದಿ ಚಾಲಕನದು. ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಹೆಂಡತಿಯ ಮೂತ್ರದ ಮಾದರಿ ಕೊಟ್ಟಿದ್ದ ಆತನಿಗೆ, ಪತ್ನಿ ಗರ್ಭಿಣಿ ಎಂಬುದು ಪುಕ್ಕಟೆ ಸಾಬೀತಾದ ಸಂತಸವನ್ನು ಅನುಭವಿಸಲು ಎದುರಿಗೆ ಕುಹಕ ನೋಟ ಬೀರುತ್ತಿದ್ದ ಅಧಿಕಾರಿಗಳ ಮುಖ ಅಡ್ಡ ಬಂದಿರಬಹುದು.

